ಆತುರ ಜಗದೀಶನಿಗೆ ಆಶ್ಚರ್ಯ ತಂದಿತು. ಸಮಯದ ಸೂಕ್ಷ್ಮತೆ ಅರಿತ ಲೇಡಿ ಕಾನ್‌ಸ್ಟೆಬಲ್ ಸರಕ್ಕನೆ ಒಳ ಓಡಿದಳು. ಅವಳನ್ನು ಹಿಡಿಯಲು ಸದಾನಂದನೂ ಓಡಲನುವಾದ. ಅವನನ್ನು ಹಿಡಿದುಕೊಂಡು ಜಗದೀಶ, 'ಸದಾನಂದ ಯಾಕೆ ಹೀಗಾಡುತ್ತಿದ್ದೀರಾ? ನಮಗೆ ಅನುಮಾನ ಬರುತ್ತಿದೆ, ಆ ಹುಡುಗಿ ಕಡಪದಲ್ಲಿ ಇಲ್ಲ... ನೀವು ನಮ್ಮಿಂದ ಏನೋ ಮುಚ್ಚಿಡುತ್ತಿದ್ದೀರಾ... ಭಯ ಬೇಡ... ನಾವು ನಿಮ್ಮ ಸಹಾಯಕ್ಕೆ ಇರೋದು ಹೇಳಿ' ಎಂದ.

ಅಷ್ಟರಲ್ಲಿ ಒಳಗಡೆಯಿಂದ ಸುಮತಿ ಹೊರಬಂದಳು. ಸದಾನಂದ ಮತ್ತು ಸುಮತಿಯ ಕಣ್ಣುಗಳು ಏನೋ ಮಾತಾಡಿಕೊಂಡವು.

'ಸರ್, ಈಗ ಸುಮಾರು ಎರಡು ಗಂಟೆಗಳ ಹಿಂದೆ ನನಗೊಂದು ಫೋನ್ ಬಂದಿತು. ಮಾಡಿದ್ದು ಯಾರು ಅಂತಾ ಗೊತ್ತಿಲ್ಲ... ಯಾವುದೋ ಖಾಸಗಿ ನಂಬರ್. ನನ್ನ ನಾದಿನಿ ಮಂಗಳಾ ಅವರ ಬಳಿ ಇದ್ದಾಳೆ... ಇನ್ನೆರಡು ದಿನದಲ್ಲಿ ಐದು ಲಕ್ಷ ರೂಪಾಯಿ ಹೊಂದಿಸಿ ಕೊಡದಿದ್ದರೆ ಅವಳನ್ನು ಕೊಲೆ ಮಾಡುವುದಾಗಿ ಬೆದರಿಸಿದ್ದಾರೆ. ಪೊಲೀಸ್ ಕಂಪ್ಲೇಂಟ್ ವಾಪಸ್ ತೆಗೆದುಕೊಳ್ಳಬೇಕು ಅಂತಾನೂ ಹೇಳಿದ್ದಾರೆ... ಹಾಗಾಗಿ ನಾನು ಆತುರಾತುರವಾಗಿ ನಿಮ್ಮ ಬಳಿ ಬಂದು ಕಂಪ್ಲೇಂಟ್ ವಾಪಸ್ಸು ತೆಗೆದುಕೊಳ್ಳಲು ಒತ್ತಾಯ ಮಾಡಿದೆ. ಈಗ ನೀವು ಇಲ್ಲಿಗೆ ಬಂದಿರುವುದು ಗೊತ್ತಾದರೆ ನಮ್ಮ ಹುಡುಗಿಯನ್ನು ಏನು ಮಾಡುತ್ತಾರೋ ಗೊತ್ತಿಲ್ಲ ಸರ್...' ಅವನ ಮಾತು ಮುಗಿಯುವುದರೊಳಗೆ ಸುಮತಿ ಜೋರಾಗಿ ಅಳಲು ಪ್ರಾರಂಭಿಸಿದಳು.

'ಹೆದರಬೇಡಿ, ನಾವು ನಿಮ್ಮ ಸಹಾಯಕ್ಕೆ ಇದ್ದೇವೆ. ನಿಮ್ಮ ನಂಬರ್ ಅನ್ನು ಟ್ರಾಕಿಂಗ್ ಮಾಡುತ್ತೇವೆ. ಮತ್ತೆ ಅವನ ಫೋನ್ ಬಂದರೆ ನಮಗೆ ಗೊತ್ತಾಗುತ್ತದೆ.'

'ಸರ್, ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿ ಬದುಕುತ್ತಿರುವವನು... ಐದು ಲಕ್ಷ ರೂಪಾಯಿ ಎಲ್ಲಿಂದ ತರಲಿ ಸರ್...'

ಮುಂದೇನು ಮಾಡುವುದು ಎಂದು ಗೊತ್ತಾಗದೆ ಜಗದೀಶ್ ಪೂಜಾರಿಗೆ ಫೋನಾಯಿಸಿ ವಿವರ ನೀಡಿದ.

'ವಾಟ್! ಐದು ಲಕ್ಷ ರೂಪಾಯಿ! ಅದೂ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವವನಿಂದ? ನಂಬಲಸಾಧ್ಯ! ಇನ್ನೂ ಹೆಚ್ಚಿನ ವಿವರಗಳನ್ನು ಕಲೆ ಹಾಕು. ನಾನೂ ಬರುತ್ತೇನೆ' ಎಂದ. ಹೇಳಿದಂತೆ ಅರ್ಧ ಗಂಟೆಯಲ್ಲಿ ಅಲ್ಲಿಗೆ ಬಂದ. ಪೂಜಾರಿಯ ಮುಖ ನೋಡಿದೊಡನೆ ಸದಾನಂದ, 'ಸರ್, ನಾನು ಏನು ಮಾಡಲಿ ಈಗ? ಎಲ್ಲಿಂದ ತರಲಿ ಅಷ್ಟು ಹಣ? ಐದು ಲಕ್ಷ ರೂಪಾಯಿ ಕೊಡಲಿಲ್ಲ ಅಂದರೆ ನನ್ನ ನಾದನಿಯನ್ನು ಕೊಲೆ ಮಾಡುತ್ತಾರಂತೆ, ಅವಳ ಅಪ್ಪ ಅಮ್ಮನಿಗೆ ನಾನೇನು ಉತ್ತರ ಹೇಳಲಿ' ಎಂದು ಅಳಲು ಆರಂಭಿಸಿದ. ಅವನ ಕೂಗು, ಅಲ್ಲಿ ನೆರೆದಿದ್ದ ಪೊಲೀಸರು... ಎಲ್ಲವನ್ನು ನೋಡಲು ಇಡೀ ಬೀದಿಯ ಜನ ನೆರೆದಿದ್ದರು. ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿ ಪೂಜಾರಿ ಜಗದೀಶನನ್ನು ತನ್ನ ಬಳಿ ಕರೆದು, 'ನನಗೇನೋ ಅನುಮಾನ ಜಗದೀಶ್... ಇಲ್ಲಿ ಬೇರೆ ಏನೊ ಇದ್ದಂತಿದೆ...'

'ಅಂದರೆ ಇದು ಕಿಡ್ನಾಪ್ ಅಲ್ಲವಾ ಸಾರ್?'

'ಸಾಧ್ಯತೆ ಬಹಳ ಕಡಿಮೆ ಇದೆ. ಆ ಹುಡುಗಿ ಯಾರ ಜೊತೆಗೋ ಓಡಿಹೋಗಿರಬಹುದು. ಜೀವನ ಮಾಡಲಿಕ್ಕೆ ದುಡ್ಡು ಬೇಕಲ್ಲವಾ... ಅದಕ್ಕೆ ಈ ರೀತಿ ಫೋನ್ ಮಾಡಿಸಿರಬಹುದು.'

ಅವನ ಮಾತುಗಳು ಅರ್ಥ ಆಗದೆ ಜಗದೀಶ ಪೂಜಾರಿಯ ಮುಖ ನೋಡಿದ.

'ಪ್ರೊಫೆಶನಲ್ ಕಿಡ್ನಾಪರ್ ತನ್ನ ಟಾರ್ಗೆಟ್‌ನ ಮನೆಯವರು ಎಷ್ಟು ದುಡ್ಡು ಕೊಡಬಲ್ಲರು